All India Radio: Bangalore
National Bulletin In Kannada
11.01.2026  7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<>><><*><><<>

ಮುಖ್ಯಾಂಶಗಳು

೧. ಗುಜರಾತ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಇಂದು ಶೌರ್ಯಯಾತ್ರೆಯಲ್ಲಿ ಭಾಗಿ

೨. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಬಜೆಟ್ ಪೂರ್ವಭಾವಿ ಸಭೆ; ಇದೇ ೨೮ ರಂದು ಸಂಸತ್ತಿನ ಬಜೆಟ್ ಅಧಿವೇಶನ

೩. ಕೇರಳ ಪ್ರವಾಸದಲ್ಲಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಬಿಜೆಪಿ ನಾಯಕರ ಸಮಾವೇಶದಲ್ಲಿ ಭಾಗಿ

೪. ಸ್ಪೀಡ್ ಪೋಸ್ಟ್ ೨೪ ಮತ್ತು ಸ್ಪೀಡ್ ಪೋಸ್ಟ್ ೪೮ ಎಂಬ ಎರಡು ಹೊಸ ಇಂಡಿಯಾ ಪೋಸ್ಟ್ ಸೇವೆಗಳನ್ನು ಘೋಷಿಸಿದ ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ

೫. ಪುರುಷರ ಏಕದಿನ ಅಂತಾರಾಷ್ಟ್ರೀಯ ಕ್ರಿಕೆಟ್; ಗುಜರಾತ್‌ನ ವಡೋದರದಲ್ಲಿ ಇಂದು ಭಾರತ-ನ್ಯೂಜಿಲೆಂಡ್ ಮುಖಾಮುಖಿ

<>><><*><><<>

ಗುಜರಾತ್‌ಗೆ ಮೂರು ದಿನಗಳ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ಇಂದು ಐತಿಹಾಸಿಕ 'ಸೋಮನಾಥ ಸ್ವಾಭಿಮಾನ್ ಪರ್ವ್'ನಲ್ಲಿ ಭಾಗವಹಿಸಲಿದ್ದಾರೆ. ೧೦೨೬ನೇ ಇಸವಿಯಲ್ಲಿ ಮೊಹಮ್ಮದ್ ಘಜ್ನಿ, ಸೋಮನಾಥ ದೇವಾಲಯದ ಮೇಲೆ ಮೊದಲ ದಾಳಿ ನಡೆಸಿ ಒಂದು ಸಾವಿರ ವರ್ಷಗಳು ಸಂದ ಹಿನ್ನೆಲೆಯಲ್ಲಿ ಹಾಗೂ ೧೯೫೧ರಲ್ಲಿ ದೇವಾಲಯವನ್ನು ಪುನರ್ ಸ್ಥಾಪಿಸಿದ ೭೫ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಈ ಸ್ವಾಭಿಮಾನ ಪರ್ವವನ್ನು ಆಚರಿಸಲಾಗುತ್ತಿದೆ. ಇಂದು, ಪ್ರಧಾನ ಮಂತ್ರಿಗಳು ದೇವಾಲಯವನ್ನು ರಕ್ಷಿಸಿದವರನ್ನು ಗೌರವಿಸುವ ವಿಧ್ಯುಕ್ತ ಮೆರವಣಿಗೆ 'ಶೌರ್ಯ ಯಾತ್ರೆ'ಯಲ್ಲಿ ಭಾಗವಹಿಸಲಿದ್ದು, ದೇವಾಲಯದಲ್ಲಿ ಪೂಜೆ ಸಲ್ಲಿಸಲಿದ್ದಾರೆ. ನಂತರ ಅವರು ಸೋಮನಾಥದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಬಳಿಕ ಅವರು, ರಾಜ್‌ಕೋಟ್‌ನಲ್ಲಿ ವೈಬ್ರಂಟ್ ಗುಜರಾತ್ ಪ್ರಾದೇಶಿಕ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಇದಕ್ಕೂ ಮೊದಲು, ನಿನ್ನೆ ಸೋಮನಾಥ ತಲುಪಿದ ಪ್ರಧಾನಿ, 'ಓಂಕಾರ ಮಂತ್ರ' ಪಠಣದಲ್ಲಿ ಭಾಗವಹಿಸಿದರು ಮತ್ತು ದೇವಾಲಯದಲ್ಲಿ ಅದ್ಭುತವಾದ ಡ್ರೋನ್ ಪ್ರದರ್ಶನವನ್ನು ವೀಕ್ಷಿಸಿದರು.

<>><><*><><<>

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ನಿನ್ನೆ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಹಣಕಾಸು ಸಚಿವರುಗಳ ಬಜೆಟ್ ಪೂರ್ವಭಾವಿ ಸಭೆ ನಡೆಯಿತು. ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ, ಮಣಿಪುರ ರಾಜ್ಯಪಾಲರು, ಗೋವಾ, ಹರಿಯಾಣ, ಮೇಘಾಲಯ, ಸಿಕ್ಕಿಂ, ದೆಹಲಿ ಮತ್ತು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿಗಳು, ಅರುಣಾಚಲ ಪ್ರದೇಶ, ಮಧ್ಯಪ್ರದೇಶ, ಒಡಿಶಾ, ರಾಜಸ್ಥಾನ ಮತ್ತು ತೆಲಂಗಾಣ ರಾಜ್ಯಗಳ ಉಪಮುಖ್ಯಮಂತ್ರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು. ೨೦೨೬-೨೭ರ ಕೇಂದ್ರ ಬಜೆಟ್‌ನಲ್ಲಿ ಪರಿಗಣಿಸಲು ಸಭೆಯಲ್ಲಿ ಭಾಗವಹಿಸುವವರು ಕೇಂದ್ರ ಹಣಕಾಸು ಸಚಿವರಿಗೆ ಹಲವಾರು ಸಲಹೆಗಳನ್ನು ನೀಡಿದ್ದಾರೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ. ಬಂಡವಾಳ ಹೂಡಿಕೆಗಾಗಿ ರಾಜ್ಯಗಳಿಗೆ ವಿಶೇಷ ಸಹಾಯಕ್ಕಾಗಿ ಹೆಚ್ಚಿನ ಹಂಚಿಕೆಗಳೊಂದಿಗೆ ಯೋಜನೆಯನ್ನು ಮುಂದುವರಿಸಬೇಕೆಂದು ಸಭೆಯಲ್ಲಿ ಪಾಲ್ಗೊಂಡಿದ್ದ ನಾಯಕರು ಮನವಿ ಮಾಡಿದ್ದಾರೆ. ಸಂಸತ್ತಿನ ಬಜೆಟ್ ಅಧಿವೇಶನ ಈ ತಿಂಗಳ ೨೮ ರಂದು ಪ್ರಾರಂಭವಾಗಲಿದೆ.

<>><><*><><<>

ಜರ್ಮನಿಯ ಫೆಡರಲ್ ಚಾನ್ಸಲರ್ ಫೆಡ್ರಿಕ್ ಮೆರ್ಜ್ ಎರಡು ದಿನಗಳ ಭಾರತ ಭೇಟಿಗಾಗಿ ನಾಳೆ ಆಗಮಿಸಲಿದ್ದಾರೆ. ಅವರು ಮೊದಲ ಹಂತದಲ್ಲಿ ಗುಜರಾತ್‌ನ ಸಬರಮತಿ ಆಶ್ರಮಕ್ಕೆ ಭೇಟಿ ನೀಡಿ, ಗೌರವ ಸಮರ್ಪಣೆ ಮಾಡಲಿದ್ದಾರೆ. ನಂತರ ಉಭಯ ದೇಶಗಳ ಸಾಂಸ್ಕೃತಿಕ ಸಂಬಂಧಗಳನ್ನು ಪ್ರತಿಬಿಂಬಿಸುವ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವದಲ್ಲಿ ಪಾಲ್ಗೊಳ್ಳುವರು. ಬಳಿಕ ಫೆಡ್ರಿಕ್ ಮೆರ್ಜ್ ಮಹಾತ್ಮ ಮಂದಿರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನಿಯೋಗಮಟ್ಟದ ಮಾತುಕತೆ ನಡೆಸಲಿದ್ದಾರೆ. ಭಾರತ ಸ್ವಾತಂತ್ರ ಚಳವಳಿ ಹಾಗೂ ಮಹಾತ್ಮಾಗಾಂಧೀಜಿಯವರ ಜೀವನ-ಸಾಧನೆ ಸಾದರಪಡಿಸುವ ದಾಂಡಿ ಕುಟೀರಕ್ಕೂ ಪ್ರಧಾನಿ ಭೇಟಿ ನೀಡಲಿದ್ದಾರೆ. ಎರಡನೇ ದಿನದಂದು ಚಾನ್ಸಲರ್ ಫೆಡ್ರಿಕ್ ಮೆರ್ಜ್, ಬೆಂಗಳೂರಿನ ಆಡುಗೋಡಿಯಲ್ಲಿರುವ ಭಾರತ-ಜರ್ಮನಿ ಸಹಯೋಗದ ಬಾಷ್ ಆವಿಷ್ಕಾರ ಮತ್ತು ತಯಾರಿಕಾ ಘಟಕಕ್ಕೆ ಭೇಟಿ ನೀಡಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಜರ್ಮನಿಯ ಫೆಡರಲ್ ಚಾನ್ಸಲರ್ ಅವರ ಭೇಟಿಯಿಂದಾಗಿ ಉಭಯ ದೇಶಗಳ ಆರ್ಥಿಕ, ತಾಂತ್ರಿಕ ಮತ್ತು ಕಾರ್ಯತಂತ್ರ ಸಹಭಾಗಿತ್ವ ಬಲಗೊಳ್ಳುವುದೆಂದು ನಿರೀಕ್ಷಿಸಲಾಗಿದೆ.

<>><><*><><<>

ಈ ವರ್ಷದ 'ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮಕ್ಕಾಗಿ ನಾಲ್ಕು ಕೋಟಿಗೂ ಅಧಿಕ ಅಭ್ಯರ್ಥಿಗಳು ನೊಂದಣಿ ಮಾಡಿಕೊಂಡಿದ್ದಾರೆ. ಕೇಂದ್ರ ಶಿಕ್ಷಣ ಖಾತೆ ಸಚಿವ ಧರ್ಮೇಂದ್ರ ಪ್ರಧಾನ್, ಸಾಮಾಜಿಕ ಮಾಧ್ಯಮದಲ್ಲಿ ಈ ವಿಷಯ ತಿಳಿಸಿದ್ದಾರೆ. ಕಳೆದ ವರ್ಷ ಮೂರೂವರೆ ಕೋಟಿಗೂ ಅಧಿಕ ನೊಂದಣಿಯಾಗಿ, ಗಿನ್ನಿಸ್ ವಿಶ್ವದಾಖಲೆ ಆಗಿತ್ತು. ಯುವ ಜನತೆಗೆ ಒತ್ತಡ ಮುಕ್ತ ಪರಿಸರ ಕಲ್ಪಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾದ ದೇಶವ್ಯಾಪಿ ಆಂದೋಲನದಲ್ಲಿ ಎಲ್ಲ ಪರೀಕ್ಷಾ ಕಟ್ಟಾಳುಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ

’ಪರೀಕ್ಷಾ ಪೇ ಚರ್ಚಾ’ ಉಪಕ್ರಮ, ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರನ್ನು ನೇರವಾಗಿ ಒಂದೇ ವೇದಿಕೆಗೆ ಕರೆತಂದು ಅವರಲ್ಲಿ ವಿಶ್ವಾಸ, ಯೋಗಕ್ಷೇಮ, ಏಕಾಗ್ರತೆ ತರುವಲ್ಲಿ ನೆರವಾಗುತ್ತಿದೆ ಎಂದು ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.

<>><><*><><<>

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕೇರಳಕ್ಕೆ ಒಂದು ದಿನದ ಭೇಟಿಗಾಗಿ ನಿನ್ನೆ ರಾತ್ರಿ ತಿರುವನಂತಪುರಂ ತಲುಪಿದರು. ಅವರನ್ನು ವಿಮಾನ ನಿಲ್ದಾಣದಲ್ಲಿ ತಿರುವನಂತಪುರಂ ಮಹಾನಗರ ಪಾಲಿಕೆಯ ಮೇಯರ್ ವಿ.ವಿ.ರಾಜೇಶ್, ಕೇರಳ ಬಿಜೆಪಿ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ಮತ್ತು ಪಕ್ಷದ ಇತರ ಹಿರಿಯ ನಾಯಕರು ಬರಮಾಡಿಕೊಂಡರು. ಇಂದು ಸಚಿವರು, ರಾಜ್ಯದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಗೆದ್ದ ಬಿಜೆಪಿ ಪ್ರತಿನಿಧಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಇಂದು ಬೆಳಿಗ್ಗೆ ಪದ್ಮನಾಭಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಮಧ್ಯಾಹ್ನ ಕೇರಳ ಕೌಮುದಿ ಸಮಾವೇಶದಲ್ಲಿಯೂ ಅವರು ಭಾಗಿಯಾಗಲಿದ್ದಾರೆ.

<>><><*><><<>

ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಸ್ಪೀಡ್ ಪೋಸ್ಟ್ ೨೪ ಮತ್ತು ಸ್ಪೀಡ್ ಪೋಸ್ಟ್ ೪೮ ಎಂಬ ಎರಡು ಹೊಸ ಇಂಡಿಯಾ ಪೋಸ್ಟ್ ಸೇವೆಗಳನ್ನು ಘೋಷಿಸಿದ್ದಾರೆ. ಇವು ೨೪ ಮತ್ತು ೪೮ ಗಂಟೆಗಳ ಒಳಗೆ ವಿತರಣೆಯನ್ನು ಖಚಿತಪಡಿಸುತ್ತವೆ. ಮಧ್ಯಪ್ರದೇಶದ ಶಿವಪುರಿ ಜಿಲ್ಲೆಯ ಪಿಚೋರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಘೋಷಣೆಯನ್ನು ಮಾಡಲಾಗಿದ್ದು, ಅಂಚೆ ಸೇವೆಗಳ ಆಧುನೀಕರಣದತ್ತ ಒಂದು ಪ್ರಮುಖ ಹೆಜ್ಜೆ ಎಂದು ಪರಿಗಣಿಸಲಾಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ಸಿಂಧಿಯಾ, ಸ್ಪೀಡ್ ಪೋಸ್ಟ್ ೨೪ ಮತ್ತು ಸ್ಪೀಡ್ ಪೋಸ್ಟ್ ೪೮ ಸಮಯಪ್ರಜ್ಞೆ, ವಿಶ್ವಾಸಾರ್ಹ ಮತ್ತು ವೇಗದ ವಿತರಣೆಯ ಹೊಸ ಮಾನದಂಡ ಸೂಚಿಸುತ್ತದೆ ಎಂದು ಹೇಳಿದರು.

<>><><*><><<>

ಸಕ್ರಿಯ ಆಡಳಿತ ಮತ್ತು ಸಕಾಲಿಕ ಅನುಷ್ಠಾನಕ್ಕಾಗಿ ಪ್ರಧಾನಮಂತ್ರಿಗಳ ಪ್ರಮುಖ ವೇದಿಕೆಯಾದ ಪ್ರಗತಿ ತನ್ನ ೫೦ನೇ ಸಭೆಯನ್ನು ಯಶಸ್ವಿಯಾಗಿ ನಡೆಸುವುದರೊಂದಿಗೆ ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ. ಇಂದು, ಈ ವಿಶೇಷ ಸರಣಿಯಲ್ಲಿ, ನಾವು ರೈಲ್ವೆ ಸಚಿವಾಲಯದ ಜಬಲ್ಪುರ್-ಗೊಂಡಿಯಾ ಗೇಜ್ ಪರಿವರ್ತನೆ ಯೋಜನೆ ಕುರಿತು ವಿಶೇಷ ವರದಿ ಮೂಡಿಬರಲಿದೆ.

ವರದಿ

ಜಬಲ್ಪುರ್-ಗೊಂಡಿಯಾ ಗೇಜ್ ಪರಿವರ್ತನೆ ಯೋಜನೆಯು ಸುಮಾರು ೨೮೫ ಕಿಲೋಮೀಟರ್‌ಗಳನ್ನು ಒಳಗೊಂಡಿದೆ. ದೇಶದ ಮಧ್ಯ ಭಾಗದಲ್ಲಿ ರೈಲು ಸಾಮರ್ಥ್ಯ ಮತ್ತು ಕಾರ್ಯಾಚರಣೆಯ ನಮ್ಯತೆಯನ್ನು ಬಲಪಡಿಸಲು ಸುಮಾರು ೧ ಸಾವಿರದ ೬೬೧ ಕೋಟಿ

ರೂಪಾಯಿ ವೆಚ್ಚದಲ್ಲಿ ಇದನ್ನು ಅನುಮೋದಿಸಲಾಗಿದೆ. ಬಾಲಘಾಟ್-ಕಟಂಗಿ ವಿಭಾಗ ಸೇರಿದಂತೆ ಅಸ್ತಿತ್ವದಲ್ಲಿರುವ ಕಿರಿದಾದ ಗೇಜ್ ಜೋಡಣೆಯನ್ನು ಬ್ರಾಡ್ ಗೇಜ್ ಆಗಿ ಪರಿವರ್ತಿಸುವುದು ಈ ಯೋಜನೆಯಲ್ಲಿ ಸೇರಿದೆ, ಇದರಿಂದಾಗಿ ಹಲವಾರು ಸ್ಯಾಚುರೇಟೆಡ್ ರೈಲು ಕಾರಿಡಾರ್‌ಗಳಿಗೆ ಪರ್ಯಾಯ ಮಾರ್ಗವನ್ನು ಸೃಷ್ಟಿಸಲಾಗಿದೆ. ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರವನ್ನು ದಾಟಿ, ಕಾರಿಡಾರ್ ಗಮನಾರ್ಹ ಕೃಷಿ ಉತ್ಪಾದನೆ, ಅರಣ್ಯ ಆಧಾರಿತ ಚಟುವಟಿಕೆ ಮತ್ತು ಖನಿಜ ಚಲನೆಯನ್ನು ಹೊಂದಿರುವ ಜಿಲ್ಲೆಗಳಿಗೆ ಸೇವೆ ಒದಗಿಸುತ್ತದೆ. ಯೋಜನೆಯು ನಿರಂತರ ಪರಿಸರ ಮತ್ತು ಸಮನ್ವಯ-ಸಂಬಂಧಿತ ಸವಾಲುಗಳನ್ನು ಎದುರಿಸಿದೆ. ಮಾರ್ಚ್ ೨೦೧೬ ರಲ್ಲಿ, ಯೋಜನೆಯನ್ನು ಪ್ರಗತಿ ಕಾರ್ಯವಿಧಾನದ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಯಿತು. ಸಮಯಕ್ಕೆ ಅನುಗುಣವಾಗಿ ಅರಣ್ಯ ಅನುಮತಿಗಳು, ಮಧ್ಯಪ್ರದೇಶ ಸರ್ಕಾರದಿಂದ ತ್ವರಿತ ಭೂ ವರ್ಗಾವಣೆ ಮತ್ತು ರೈಲ್ವೆ, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು ಮತ್ತು ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯಗಳ ನಡುವಿನ ನಿಕಟ ಸಮನ್ವಯದ ಮಹತ್ವವನ್ನು ಪರಿಶೀಲನೆಯು ಬಲಪಡಿಸಿತು. ಪ್ರಗತಿಯ ಅಡಿಯಲ್ಲಿ ಯೋಜನೆಯ ಉನ್ನತೀಕರಣವು ಅಂತರ-ಇಲಾಖೆಯ ಹೊಣೆಗಾರಿಕೆಯನ್ನು ಬಲಪಡಿಸಿತು, ಅರಣ್ಯ, ಕಂದಾಯ ಇಲಾಖೆಗಳನ್ನು ಕಾರ್ಯಗತಗೊಳಿಸುವ ಅವಶ್ಯಕತೆಗಳಿಗೆ ನೇರವಾಗಿ ಸಂಬಂಧಿಸಿದ ಹಂಚಿಕೆಯ ಸಮಯಮಿತಿಯ ಸುತ್ತ ಜೋಡಿಸಿತು. ಪರಿಸರ ಮತ್ತು ಭೂ-ಸಂಬಂಧಿತ ಅಡೆತಡೆಗಳನ್ನು ಪರಿಹರಿಸುವುದರೊಂದಿಗೆ, ಉಳಿದ ವಿಭಾಗಗಳಲ್ಲಿ ಕೆಲಸಗಳು ಮುಂದುವರೆದವು, ಮಾರ್ಚ್ ೨೦೨೧ ರಲ್ಲಿ ಜಬಲ್ಪುರ್-ಗೊಂಡಿಯಾ ಬ್ರಾಡ್-ಗೇಜ್ ಕಾರಿಡಾರ್‌ನ ಪೂರ್ಣ ಕಾರ್ಯಾರಂಭದಲ್ಲಿ ಕೊನೆಗೊಂಡಿತು. ಇದು ೧೦೦ ಪ್ರತಿಶತ ಭೌತಿಕ ಪ್ರಗತಿಯನ್ನು ಸಾಧಿಸಿತು ಮತ್ತು ಪರ್ಯಾಯ ರೈಲು ಮಾರ್ಗದ ಉದ್ದೇಶಿತ ಕಾರ್ಯಾಚರಣೆಯ ಪ್ರಯೋಜನಗಳನ್ನು ತಲುಪಿಸಿತು.

<>><><*><><<>

ಭಾರತ-ನ್ಯೂಜಿಲೆಂಡ್ ತಂಡಗಳ ನಡುವೆ ಗುಜರಾತ್‌ನ ವಡೋದರದಲ್ಲಿ ಇಂದು ಮೊದಲ ಏಕದಿನ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯ ನಡೆಯಲಿದೆ. ಒಟ್ಟು ಮೂರು ಏಕದಿನ ಪಂದ್ಯಗಳು ನಡೆಯಲಿವೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>